ಸಂದೀಲು ಬೀದಿ ಬೀದಿಲು ಓಡಾಡುತ್ತಿರುವ ಈ ಹೊತ್ತಿನಲ್ಲಿ ಸಿದ್ದಮ್ಮ ಮತ್ತು ಗಂಗಣ್ಣನ ಮನೆಯ ಮುಂದಿನ ನೀರು ತುಂಬಿರುವ ಡ್ರಮ್ಮಿನ ಮ್ಯಾಲೆ ಈ ಆಶಾ ಕಾರ್ಯಕರ್ತೆಯರ ಕಣ್ಣುಗಳು ಬಿದ್ದು ಆ ಕಣ್ಣುಗಳ ಕಣ್ಣೊಳಗೆ ಬ್ಯಾಟರಿ ಹೊತ್ತಿಕೊಂಡು. ಆ ಕಣ್ಣ ಸಂಪ್ರೊಳಗೆ ನಿಗಾ ಮಾಡುತ್ತ ಬಗ್ಗಿಬಗ್ಗಿ ನೋಡುತ್ತಿರುವಾಗ ಆ ನೀಲಿ ಡ್ರಮ್ಮು ನೀರು ತುಂಬಿ ತಂಬಿ ತಳಭಾಗದಲ್ಲಿ ಅಡಿಗಟ್ಟಲೆ ಆವುಚಿಗಟ್ಟಿ ಥರಾವರಿ ಬಣ್ಣವಾಗಿ ಕಾಣತೊಡಗಿತು. ಅಂಗೆ ಬಗ್ಗಿ ಬಗ್ಗಿ ನೋಡುವ ಆಶಾ ಕಾರ್ಯಕರ್ತೆಯರ ಬ್ಯಾಟರಿ ತುಂಬಿರುವ ಕಣ್ಣುಗಳಿಗೆ ಕಪ್ಪು ಲಾರ್ವಾ ಹುಳುಗಳು ಜಗ ಜಗನೆ ಈಜಾಡುತ್ತಿದ್ದವು. 'ಯವ್ವ ಯವ್ವ ಜಯ ಈ ನೀರೊಳಗೆ ಏಸೊಂದು ಉಳಾ ಅವ್ವೆ ಕಣೆ ನೀನು ಇಷ್ಟು ದಿನ ಎತ್ತ ಕಣ್ಣು ಬಿಡತಿದ್ದೆ?' ಎಂದು ಅವಳು ನಿಂಗಯ್ಯನ ಪಾಳ್ಯದ ಸಾವಿತ್ರಿ ಪ್ರಶ್ನೆ ಮಾಡತಾ ಅವಳೆ. ಇವರ ಸದ್ದು ಗದ್ದಲದ ಮಾತಿನ ಸುಳಿವು ಸಿಕ್ಕಿದ ಸಿದ್ದಮ್ಮನ ಕಿರಿ ಸೊಸೆ ನಡುಮನೆಯ ಗ್ವಾಡಿಗೆ ಕುಂತು ಕೈಯ್ಯಲ್ಲಿಡುಕೊಂಡಿದ್ದ ಪೋನುನ್ನ ಬಿಸಾಕಿ ದಡ ದಡನೆ ಓಡ್ ಬಂದು ಒಂದೆ ಉಸಿರಿಗೆ, 'ಯಕ ಏನಿಂಗ್ ನೋಡತಿದ್ದೀರಾ?' ಎಂದಳು. ಅವಳುಸಿರು ಬಸಬಸನೆ ವದರಾಡುತ್ತಿತ್ತು. ಬೇರೂರಿನ ಆಶಾ ಕಾರ್ಯಕರ್ತೆಯರು ಹುಡುಗಿಯನ್ನ ಯಗಾದಿಗಿಯಾಗಿ ನೋಡ ತೊಡಗಿದರು. 'ಲೇ ಅಮ್ಮಿ ಡ್ರಮ್ಮೊಳಗೆ ಉಳಾ ಬಿದ್ದಾವಲ್ಲ. ಉಳಾ ಅವೆ. ಈ ಉಳಾನೆ ಕಣಮ್ಮ ಸೊಳ್ಳೆ ಆಗಾದು, ಏ ಚೆಲ್ಲಿ ಬಿಡ್ರಮ್ಮ ಹೆಲ್ತನವರೇನಾದ್ರು ಬಂದರೆ ನಮ್ಮುನ್ನುಗಿತಾರೆ..' ಎಂದು ಮಾತನಾಡಿಕೊಂಬುತ್ತಿರುವಾಗ 'ಯಕ ಯಕ ಚೆಲ್ಲಬ್ಯಾಡ್ರಿ? ನಮ್ಮನೆ ನಲ್ಲೀಲಿ ನೀರೆ ಬರ್ತಿಲ್ಲ. ನಮ್ಮಾಮ ಕಷ್ಟಬಿದ್ದು ತುಂಬುಸೈತೆ. ನಮ್ಮತ್ತೆಮ್ಮ ಬಂದ್ರೆ ನಿಮ್ಮುನ್ನ ಬೈಯ್ಯಲ್ಲ ನನ್ನುನ್ನ ಬೈತಾಳೆ. ಯವ್ವ ಏನ್ ಮುಟ್ಟೀರು ನೀರ್ ಮಾತ್ರ ಮುಟ್ಟು ಬ್ಯಾಡ್ರಿ?' ಅಂತೇಳಿ ಅವಳ ನೀರುತುಂಬಿರುವ ಡ್ರಮ್ಮನ್ನ ಬಿಗಿಯಾಗಿಡುಕೊಂಡ್ಲು. ಅಲ್ಲಿಗೆ ಬಂದಿದ್ದ ಮೂವರು ಆಶಾ ಕಾರ್ಯಕರ್ತೆಯರು ಎಷ್ಟು ಬುದ್ಧಿ ಹೇಳೀರು ಆ ಹುಡುಗಿ ಕೇಳ್ಳಿಲ್ಲ, ಅಲ್ಲೆ ಅವರ ಮನೆಪಕ್ಕದ ಒಂದುಡುಗನಿಗೆ ಜ್ವರ ಬಂದು ಡೇಂಗ್ಯು ಎಂದು ಪತ್ತೆಯಾಗೈತಲ್ಲ. ನಿಮಗೆ ನೀರ್ ಮುಖ್ಯಾನೊ ಆರೋಗ್ಯ ಮುಖ್ಯಾನೊ? ಎಂದು ಎಷ್ಟು ಬುದ್ಧಿ ಹೇಳಿದರು ಹುಡುಗಿ ಕೇಳುತ್ತಿಲ್ಲ, 'ಅಯ್ಯೊ ಈ ಜನಕ್ಕೆ ಎಷ್ಟೇಳೀರು ಬುದ್ಧಿ ಬರ್ತಿಲ್ಲವಲ್ಲ' ಸಾವಿತ್ರಿ ಎಂಬೋಳು ಹಣೆಹಣೆ ಚಚ್ಚಿಕೊಂಡಳು. ಇಂತದ್ದೊಂದು ಅಸ್ಸಾಹಾಯಕತೆಯನ್ನ ಎದುರಿಸಲಾರದೆ ಬಂದ ದಾರಿಗೆ ಸುಂಕವಿಲ್ಲವೆಂದು ಆಶಾ ಕಾರ್ಯಕರ್ತೆಯರು ತೆಪ್ಪಗೆ ಮುಂದಕ್ಕೋದರು. ಸಿದ್ದಮ್ಮನ ಮನೆಯ ಈ ಕಿರಿ ಸೊಸೆ ಒಂದು ಕಡ್ಡಿ ತಗದಾಕು ಅಂದ್ರೆ ಕಿವಿ ಇಲ್ಲದೋಳಂಗೆ ಕಂಡರು ಕಾಣದಂತೆ ಕಾಲವರಣೆ ಮಾಡುವವಳತ್ತಿರ, ದೊಡ್ಡಸೊಸೆ ಶೋಭಾ ಎಂಬೋಳಿಗೂ ಇವಳಿಗೂ ಇದೇ ವಿಚಾರಕ್ಕಾಗಿ ಮನ್ನೆ ದಿವಸ ತಾರಾ ಮಾರಿ ಜಗಳವಾಗಿತ್ತು. ಇದನ್ನ ನೋಡಿ ಸುಮ್ಮನಿರದ ಅವರ ಗಂಡದಿಂರು 'ಇನ್ನುಮೇಲೆ ಮನೆಯ ಕೆಲಸವನ್ನೆಲ್ಲ ನೀವಿಬ್ಬರೆ ಮಾಡಕಳಬೇಕು. ನಮ್ಮಪ್ಪ ನಮ್ಮಮ್ಮ ಏನಿದ್ದರು ಹುಲ್ಲು ಸೊಪ್ಪು ದನಾಕರ ಎರಡೆ ನೋಡಿಕೊಂಡಿರಲಿ' ಎಂದು ತೀರ್ಮಾನ ಕೊಟ್ಟಿದ್ದರು. ಆವತ್ತಿನಿಂದ ಇವಳೊಂದು ದಿವಸ ಮತ್ತೆ ದೊಡ್ಡಸೊಸೆ ಒಂದು ದಿವಸ ನೀರು ತುಂಬುವ ಲೆಕ್ಕಾಚಾರಕ್ಕೆ ಒಪ್ಪಂದವಾಗಿರುವ ಈ ಹೊತ್ತಿನಲ್ಲಿ ಇವತ್ತೇನಾರ ಈ ನೀರಿನಲ್ಲಿ ಉಳಾ ಬಿದ್ದಾವೆಂದು ಚೆಲ್ಲಿಸಿಬಿಟ್ಟದ್ದರೆ. ನಾಳೆಯಿಂದ ಈ ಕಿರೇ ಸೊಸೆನೆ ನೀರು ತುಂಬಿಸೊ ಸರತಿಗೆ ಬಗ್ಗು ಬೇಕಾಗಿತ್ತಲ್ಲ, ಅಂಗಾಗಿ ಅಮ್ಮಣ್ಣಿ ಇವತ್ತು ಸುತಾರಾಮ್ ಡ್ರಮ್ಮಿನ ನೀರನ್ನು ಚೆಲ್ಲಿಸಲಿಲ್ಲ. ರಾತ್ರಿ ಹಾಸಿಗೆ ಮ್ಯಾಲಿನ ಜಯಮ್ಮಳ ಗಂಡ ಇವತ್ತ್ಯಾವ ಸಂದೀಲಿ ಯಾರ್‍ಯಾರಿಗೆ ಫಿಟಂಗಿಕ್ಕದೆ ಯಾರತ್ರ ಉಗುಸ್ ಕಂಡು ಬಂದಮ್ಮಣ್ಣಿ ಅಂದವನ ಉಸಿರು ಬಸಬಸನೆ ದಪ್ಪವಾಗಿ ಅದು ಗಬ್ಬು ನಾತವಾಗಿ. ಆ ವಾಸನೆ ಜಯಮ್ಮನೆದೆಯ ವಾಂತಿಯ ಬಟ್ಟಲನ್ನ ಬಗ್ಗಿಸಿದಂತಾಗಿ ಅವಳ ಪಿಳಿ ಪಿಳಿ ಕಣ್ಣಲ್ಲಿ ರಾತ್ರಿಯ ಕರೆ ಕತ್ತಲು ಹಸಿರಾಗಿ ನೀಲಿಯಾಗಿ ಕೆಂಪಾಗಿ ಕವ ಕವನೆ ನಕ್ಕಂತಾಯಿತು.

ಮಾರನೆ ಬೆಳಿಗ್ಗೆ ಬಂದ ಹೋಬಳಿ ಕೇಂದ್ರದ ಹೆಲ್ತ ಸೆಂಟರ್‌ನ ಸಿಬ್ಬಂದಿಗಳು ಇದೇ ಊರಲ್ಲಿ ಜ್ವರದ ಕೇಸುಗಳು ಯಾಕಿಷ್ಟು ಪತ್ತೆಯಾಗುತ್ತಿವೆ ಎಂಬ ತಲೆನೋವಿನ ಹಿನ್ನಲೆಯಲ್ಲಿ. ಊರಲ್ಲಿ ಸರ್ವೆ ಮಾಡುತ್ತ ಬಂದವರು ಸಿದ್ದಮ್ಮನ ಮನೆಯ ಮುಂದಿದ್ದ ನೀಲಿ ಡ್ರಮ್ಮನ್ನು ಬಗ್ಗಿ ನೋಡೀರು. ಅವರ